ಭೂಕಂದಾಯ ಬಾಕಿ ಎಂದು ವಸೂಲು ಮಾಡಲು ಪ್ರಮಾಣ ಪತ್ರ ವನ್ನು ನೀಡಲಾಗಿದೆ.

ಈ ವಿಷಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಆದೇಶದ ನಂತರ ಮುಂದೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ರಾಜಕಾಲುವೆಗಳ ಒತ್ತುವರಿ

1910 (2276); ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)

ಅ) ಚಿಂತಾಮಣಿ ವಿಧಾನಸಭಾ ಕ್ಷೇತ್ರದಲ್ಲಿರುವ ನಗರಸಭೆಯ ವಾರ್ಡವಾರು ಇರುವ ರಾಜಕಾಲುವೆಗಳು ಯಾವುವು; ಅವುಗಳ ಉದ್ದವೆಷ್ಟು;

ಆ) ಈ ರಾಜಕಾಲುವೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ಅಭಿವೃದ್ಧಿ ಪಡಿಸುವ ಕಾಲುವೆಗಳ ವಿವರ ನೀಡುವುದು);

ಇ) ಈ ನಗರಸಭೆಯ ವಾರ್ಡಗಳಲ್ಲಿರುವ ರಾಜಕಾಲುವೆಗಳ ಒತ್ತುವರಿ ಯನ್ನು ತೆರವುಗೊಳಿಸಲು ಕೈಗೊಂಡ ಕ್ರಮಗಳೇನು;

ಈ) ಹಾಗಿದ್ದಲ್ಲಿ, ಇವುಗಳನ್ನು ಯಾವ ಕಾಲಮಿತಿಯೊಳಗೆ ತೆರವುಗೊಳಿಸಲಾ ಗುವುದು?

ಡಾ. ಖಮರುಲ್ ಇಸ್ಲಾಂ (ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು)

ಅ) **ವಾರ್ಡುವಾರು ರಾಜಕಾಲುವೆಗಳ ವಿವರ ಈ ಕೆಳಕಂಡಂತಿದೆ:**

ಎ) ಆಶ್ರಯ ಬಡಾವಣೆ ವಾರ್ಡ ನಂ.2 ರಿಂದ ವಾರ್ಡ ನಂ. 01	ಉದ್ದ 1.32 ಕಿ.ಮೀ.
ಬಿ) ವಾರ್ಡ ನಂ. 4,3,25	ಉದ್ದ 3.564 ಕಿ.ಮೀ.
ಸಿ) ವಾರ್ಡ ನಂ. 7	ಉದ್ದ 3.30 ಕಿ.ಮೀ.

ಡಿ) ವಾರ್ಡ ನಂ. 8	ಉದ್ದ 2.31 ಕಿ.ಮೀ
ಇ) ವಾರ್ಡ ನಂ. 10	ಉದ್ದ 6.757 ಕಿ.ಮೀ.
ಎಫ್) ವಾರ್ಡ ನಂ. 19	ಉದ್ದ 1.749 ಕಿ.ಮೀ.

ಆ) ರಾಜಕಾಲುವೆಗಳನ್ನು ಅಭಿವೃದ್ಧಿಪಡಿಸಲು ಈ ಕೆಳಕಂಡ ಸ್ಥಳಗಳಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

ರಾಜಕಾಲುವೆಗಳ ವಿವರ	ತೆಗೆದುಕೊಂಡ ಕಾಮಗಾರಿಗಳ ವಿವರ
ಎ) ಆಶ್ರಯ ಬಡಾವಣೆ ವಾರ್ಡ ನಂ. 2 ರಿಂದ ವಾರ್ಡ ನಂ. 1 ರ ವೆಂಕಟಗಿರಿ ಕೋಟೆ ಮೂಲಕ 31ನೇ ವಾರ್ಡ ತಿಮ್ಮಸಂದ್ರದಲ್ಲಿ ಹಾದು ಹೋಗಿ ನೆಕ್ಕುಂದಿಕೆರೆ ಸೇರುತ್ತದೆ. ಉದ್ದ 1.32 ಕಿ.ಮೀ.	1. 1110.00 ಮೀ. ಉದ್ದದ ಚರಂಡಿಯನ್ನು ನಗರೋತ್ಥಾನ 2ರ ಯೋಜನೆಯಡಿಯಲ್ಲಿ ಪ್ರಸ್ತಾಪಿಸಿದ್ದು, ಕಾಮಗಾರಿ ಪ್ರಾರಂಭಿಸಬೇಕಾಗಿದೆ. 2. 200.00 ಮೀ ಉದ್ದದ ಚರಂಡಿಯನ್ನು 13ನೇ ಹಣಕಾಸು ಯೋಜನೆಯಡಿ ಪ್ರಸ್ತಾಪಿಸಿದ್ದು, ಕಾಮಗಾರಿ ಪ್ರಾರಂಭಿಸಬೇಕಾಗಿದೆ.
ಬಿ) ವಾರ್ಡ ನಂ. 4,3,25 ರಲ್ಲಿ ಹಾದು ಹೋಗುವ ರಾಜಕಾಲುವೆ ಉದ್ದ 3.564 ಕಿ.ಮೀ.	3) 855.00 ಮೀ. ಉದ್ದದ ಚರಂಡಿ ಕೆಲಸ ಮುಕ್ತಾಯವಾಗಿರುತ್ತದೆ.
ಸಿ) ವಾರ್ಡ ನಂ. 7, 8 ಹಾದುಹೋಗಿ ಮಾಳಪಲ್ಲಿ ಕೆರೆ ಸೇರುತ್ತದೆ. ಉದ್ದ 3.30 ಕಿ.ಮೀ.	4) 600.00 ಮೀ ಉದ್ದದ ಚರಂಡಿ ಕೆಲಸ ಮುಕ್ತಾಯವಾಗಿರುತ್ತದೆ
ಡಿ) ವಾರ್ಡ ನಂ. 8 ರಲ್ಲಿ ಬೆಟ್ಟದ ತಪ್ಪಲಿನಿಂದ ಕನ್ನಂಪಲ್ಲಿ ಸ್ಮಶಾನದಲ್ಲಿ ಹಾದು ಹೋಗಿ ಮಾಳಪಲ್ಲಿ ಕೆರೆಗೆ	5) 380.00 ಮೀ. ಉದ್ದದ ಚರಂಡಿ ಕೆಲಸ ಮುಕ್ತಾಯವಾಗಿರುತ್ತದೆ.

ಸೇರುತ್ತದೆ. ಉದ್ದ 2.31 ಕಿ.ಮೀ.	
ಇ) ವಾರ್ಡ ನಂ. 10 ರಿಂದ ಹಾದು ಹೋಗಿ ಕೋಲಾರ್ ಕ್ರಾಸ್ ಮುಖಾಂತರ ಗೋಪಸಂದ್ರ ಕೆರೆ ಸೇರುತ್ತದೆ. ಉದ್ದ 6.757 ಕಿ.ಮೀ.	6) 396.45 ಮೀ. ಉದ್ದದ ಚರಂಡಿ ಕೆಲಸ ಮುಕ್ತಾಯವಾಗಿರುತ್ತದೆ. 7) 375.00 ಮೀ. ಉದ್ದದ ಚರಂಡಿಯನ್ನು ನಗರೋತ್ಥಾನ 2ರ ಯೋಜನೆಯಡಿಯಲ್ಲಿ ಪ್ರಸ್ತಾಪಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.
ಎಫ್) ವಾರ್ಡ ನಂ. 19 ಬಂಬೂಬಜಾರ್ ನಿಂದ ರಾಮಕುಂಟೆವರೆಗೆ ಉದ್ದ 1.749 ಕಿ.ಮೀ.	8) 330.60 ಮೀ. ಉದ್ದದ ಚರಂಡಿ ಕೆಲಸ ಮುಕ್ತಾಯವಾಗಿರುತ್ತದೆ. 9) 150.00 ಮೀ. ಉದ್ದದ ಚರಂಡಿಯನ್ನು ನಗರೋತ್ಥಾನ 2ರ ಯೋಜನೆಯಡಿಯಲ್ಲಿ ಪ್ರಸ್ತಾಪಿಸಿದ್ದು, ಕಾಮಗಾರಿ ಪ್ರಾರಂಭಿಸಬೇಕಾಗಿದೆ.
ಒಟ್ಟು ಉದ್ದ 19.00 ಕಿ.ಮೀ.	ಈಗಾಗಲೇ ಅಭಿವೃದ್ಧಿಪಡಿಸಿರುವ ರಾಜಕಾಲುವೆಗಳ ಉದ್ದ 2562.05 ಮೀ. ಪ್ರಗತಿಯಲ್ಲಿರುವ ಮತ್ತು ಪ್ರಾರಂಭ ಮಾಡಬೇಕಾಗಿರುವ ರಾಜಕಾಲುವೆಗಳ ಉದ್ದ 1835.00 ಮೀ.
ಒಟ್ಟು 6.075 ಕಿ. ಮೀ. ಮಳೆ ನೀರು ಚರಂಡಿ ಕಾಮಗಾರಿಗಳನ್ನು UIDSSMT ಯೋಜನೆಯಡಿ ಕೈಗೊಳ್ಳಲು DPR ನ್ನು ತಯಾರಿಸಿ ಅನುಮೋದನೆಗೆ ಸಲ್ಲಿಸಲಾಗಿತ್ತು. UIDSSMT ಯೋಜನೆಯು Transition ಹಂತದ ಅವಧಿಯು 31.03.2014ಕ್ಕೆ ಮುಕ್ತಾಯವಾಗಿರುವುದರಿಂದ ಸದರಿ DPR ನ್ನು ಕೇಂದ್ರ ಸರ್ಕಾರದಲ್ಲಿ ಪರಿಗಣಿಸಿರುವುದಿಲ್ಲ.	

ಇ) ನಗರಸಭೆ ವ್ಯಾಪ್ತಿಯಲ್ಲಿರುವ ರಾಜ ಕಾಲುವೆಗಳ ಸರ್ವೇ ಮಾಡಿ ಹದ್ದುಬಸ್ತು ಗುರ್ತಿಸಿ, ವರದಿ ನೀಡಲು ತಹಶೀಲ್ದಾರ್ ಚಿಂತಾಮಣಿ ರವರಿಗೆ ತಿಳಿಸಲಾಗಿದ್ದು, ಸರ್ವೆ ಮಾಡಿ ಒತ್ತುವರಿಯಾಗಿರುವ ಪ್ರದೇಶದ ವರದಿಯನ್ನು ನೀಡಲು ತಿಳಿಸಿದೆ.

ಈ) ಸರ್ವೆ ಕಾರ್ಯಮುಗಿದ ನಂತರ ವರದಿಯ ಆಧಾರದ ಮೇಲೆ ಜಂಟಿ ಯಾಗಿ ತಾಲ್ಲೂಕು ಕಛೇರಿ ಮತ್ತು ನಗರಸಭೆಯಿಂದ ಒತ್ತುವರಿ ತೆರವು ಗೊಳಿಸಿದ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು.

ರೈತರಿಗೆ ನೀಡಿರುವ ಯೋಜನೆಗಳು

1911 (3090); ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)

ಅ) ಚಿಂತಾಮಣಿ ವಿಧಾನಸಭಾ ಕ್ಷೇತ್ರದಲ್ಲಿ 2011–12ನೇ ಸಾಲಿನಿಂದ 2013–14ನೇ ಸಾಲಿನವರೆಗೂ ಅನುಷ್ಠಾನ ಮಾಡಿದ ಕೃಷಿ ಇಲಾಖೆ ಯೋಜನೆ ಗಳಾವುವು, ಅವುಗಳಿಗೆ ವೆಚ್ಚ ಮಾಡಿದ ಹಣವೆಷ್ಟು (ವಾರ್ಷಿಕವಾರು, ಯೋಜನೆವಾರು ವಿವರ ಒದಗಿಸುವುದು)

ಆ) 2014–15ನೇ ಸಾಲಿನಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆ ಗಳಾವುವು ಅವುಗಳ ರೂಪುತೇಷೆಗಳೇನು (ವಿವರ ಒದಗಿಸುವುದು)

ಇ) ಕೃಷಿ ಇಲಾಖೆ ವತಿಯಿಂದ 2011–12ನೇ ಸಾಲಿನಿಂದ 2013–14ನೇ ಸಾಲಿನವರೆಗೂ ರೈತರಿಗೆ ಉಪಯೋಗವಾಗುವ ಉಪಕರಣಗಳು, ನೀಡಿರುವ ಫಲಾನುಭವಿಗಳ ಪಟ್ಟಿಯನ್ನು ಒದಗಿಸುವುದು, ಉಪಕರಣ ಗಳಿಗೆ ವೆಚ್ಚ ಮಾಡಿದ ಮೊತ್ತ ಎಷ್ಟು (ವಿವರ ನೀಡುವುದು)?

ಶ್ರೀ ಕೃಷ್ಣ ಬೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) ಕೃಷಿ ಇಲಾಖೆ: 2011–12 ರಿಂದ 2013–14ರವರೆಗೆ ಚಿಂತಾಮಣಿ ವಿಧಾನ ಸಭಾ ಕ್ಷೇತ್ರದಲ್ಲಿ ಕೃಷಿ ಇಲಾಖೆ ಅನುಷ್ಠಾನ ಮಾಡಿರುವ ಯೋಜನೆಗಳು ಹಾಗೂ ಅವುಗಳಿಗೆ ವೆಚ್ಚ ಮಾಡಿದ ಹಣದ ವಿವರ ಗಳನ್ನು 'ಅನುಬಂಧ–1' ರಲ್ಲಿ ನೀಡಲಾಗಿದೆ.